ನಿಂತರೆ ಅಥವಾ ಪ್ರದರ್ಶನದ ನಟ್ಟನಡುವೆ ಲೈಟ್ಸ್ ಕೈ ಕೊಟ್ಟರೆ ತಕ್ಷಣವೇ ಅದಕ್ಕೊಂದು ಪರ್ಯಾಯ ಹುಡುಕಿಕೊಳ್ಳಬೇಕು. ಇವರು ನಾಟಕದ ಹೀರೊಗಳಲ್ಲದೆಯೂ ಹೀರೊಗಳೇ! ಇನ್ನು ಸಂಗೀತ ನಿರ್ವಹಿಸುವವರೂ ಅಷ್ಟೇ. ನಟರು ಮಧ್ಯದಲ್ಲೇ ಮಾತು ಮರೆತೋ ಅಥವಾ ಮತ್ಯಾವುದೋ ಕಾರಣಕ್ಕೆ ಸೀನ್ ಬದಲಾವಣೆ ಆಗ್ತಾ ಇದೆ ಅನ್ನಿಸಿದರೆ ಸಂಗೀತವನ್ನೂ ಅದಕ್ಕೆ ಹೊಂದುವ ಹಾಗೆ ನಿರ್ವಹಿಸಬೇಕು.

ಸಿನಿಮಾ ಹಾಗಲ್ಲ. ಅದರ ತಯಾರಿ ಬೇರೆ, ಶೂಟಿಂಗ್ ಸಮಯ ಬೇರೆ. ನಟರ ನಟನೆ, ಸ್ಕ್ರಿಪ್ಟು ಬೇರೆ, ಕಂಟಿನ್ಯೂಯಿಟಿ ನೋಡಿಕೊಳ್ಳುವವರು, ನಿರ್ದೇಶಕ, ಸಹಾಯಕರು ಎಲ್ಲ ಅಂಶಗಳೂ ಬೇರೆ ಬೇರೆ ಸಮಯದಲ್ಲಿ ಒಟ್ಟಾಗುತ್ತವೆ. ಒಂದು ಸಿನಿಮಾ ಆದ ಅನಂತರ ಪೋಸ್ಟ್ ಪ್ರೊಡಕ್ಷನ್ ಬೇರೆ. ಡಬ್ಬಿಂಗ್, ಮಿಕ್ಸಿಂಗ್, ಅನಂತರ ದೊಡ್ಡ ದೊಡ್ಡ ಕಂಪ್ಯೂಟರಿನ ಮೇಲೆ ಜೆನರೇಟ್ ಆಗುವ ಅದ್ಭುತ

